<u>ಸಾಕ್ಷಿಯನ್ನು ದಿಃ 01.06.2022 ರಂದು ಕರೆಸಿ ಪ್ರಮಾಣ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ಎ.ಎಂ.ಆರ್ ವಕೀಲರಿಂದಃ</u>

ಈ ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲಾತಿಗಳನ್ನು ಓದಿ ತಿಳಿದುಕೊಂಡಿರುತ್ತೇನೆ. ಈ ದಾವೆ ಸಲ್ಲಿಸಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನಾನು ಕೆ.ಜಿ.ಎಫ್ ನಿವಾಸಿಯಾಗಿದ್ದು ಬೆಂಗಳೂರಿನ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು ದಾವಾ ಸ್ವತ್ತು ಇರುವ ಗ್ರಾಮವನ್ನು ನೋಡಿರುತ್ತೇನೆ. ದಾವಾ ಸರ್ವೇನಂಬರ್ 41/9 ಆಗಿರುತ್ತದೆ. ಅದರ ಒಟ್ಟು ವಿಸ್ತೀರ್ಣ ಎಷ್ಟು ಇದೇ ಎಂದು ಗೊತ್ತಿಲ್ಲ. ನನ್ನ ತಂದೆ ಮೃತಪಟ್ಟು 7 ವರ್ಷಗಳಾಗಿರುತ್ತದೆ. ನನ್ನ ತಂದೆ ಖರೀದಿಸಿದ ಸ್ವತ್ತಿನ ಮಾರಾಟಗಾರರಾದ ಲಕ್ಷ್ಮಮ್ಮ ಮತ್ತು ಆಕೆಯ ಗಂಡ ಮುನಿಯಪ್ಪನನ್ನು ನಾನು ನೋಡಿರುವುದಿಲ್ಲ. ಸದರಿ ಮುನಿಯಪ್ಪರವರು ಚಿಕ್ಕಪಾಪಯ್ಯ ರವರಿಗೆ ದಿನಾಂಕ 30.07.1966 ರ ಕ್ರಯಪತ್ರದಂತೆ ಮಾರಾಟ ಮಾಡಿರುವ ಸ್ವತ್ತಿನ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ಮುನಿಯಪ್ಪ ಅಥವಾ ಚಿಕ್ಕಪಾಪಯ್ಯರವರ ಹೆಸರಿನಲ್ಲಿರುವ ಕಂದಾಯ ದಾಖಲಾತಿಗಳನ್ನು ನೋಡಿರುವುದಿಲ್ಲ ಎಂದರೆ ಸರಿ.

ನಿಪಿ-6 ಕ್ರಯಪತ್ರದ ಸ್ವತ್ತಿನ ಪೂರ್ವಕ್ಕೆ ಭವಾನಿ ರವರ ಸ್ವತ್ತು ಪಶ್ಚಿಮಕ್ಕೆ ಗುಳ್ಳಮುನಿಯಪ್ಪನ ಸ್ವತ್ತು, ಉತ್ತರಕ್ಕೆ ಶಾಂತಮ್ಮ ರವರ ಸ್ವತ್ತು ಮತ್ತು ದಕ್ಷಿಣಕ್ಕೆ ರಸ್ತೆ. ಸದರಿ ಕ್ರಯಪತ್ರದಲ್ಲಿ 1 ಎಕರೆ 12 ಗುಂಟೆ ವಿಸ್ತೀರ್ಣ ನಮೂದಾಗಿರುತ್ತದೆ. ನಿಪಿ-6 ರ ಕ್ರಯಪತ್ರದಲ್ಲಿ ಮೇಲ್ಕಂಡ ವಿವರಗಳು ಇರುವುದಿಲ್ಲ ಎಂದರೆ ಸರಿಯಲ್ಲ ನಮ್ಮ ತಂದೆಯ ಮಾರಾಟಗಾರರಾದ ಲಕ್ಷ್ಮಮ್ಮರವರಿಗೆ ಸದರಿ ಕ್ರಯಪತ್ರದ ಸ್ವತ್ತನ್ನು ಮಾರಾಟ ಮಾಡಲು ಯಾವುದೇ ರೀತಿಯ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಕ್ರಯಪತ್ರದ ಪ್ರಕಾರ ನನ್ನ ತಂದೆ ಹೆಸರಿಗೆ ಖಾತೆ ಬದಲಾವಣೆಯಾಗಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಹೆಸರಿಗೆ ಖಾತ ಬದಲಾವಣೆಯಾಗಿರುವ ಬಗ್ಗೆ ಯಾವುದೇ ಕಂದಾಯ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ-1 ರಿಂದ 4 ರ ಅಸಲು ದಾವಾ ಸಂಖ್ಯೆ 97/1970 ರ ದಾಖಲಾತಿಗಳಲ್ಲಿ ಸರ್ವೇ ನಂಬರ್ ಮತ್ತು

ವಿಸ್ತೀರ್ಣ ನಮೂದಾಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ನಿಪಿ-1 ರಿಂದ 4 ರ ದಾಖಲಾತಿಗಳಲ್ಲಿ ನಮೂದಾಗಿರುವ ಚೆಕ್ಕುಬಂಧಿ ಮತ್ತು ದಾವಾ ಚೆಕ್ಕುಬಂಧಿ ಬೇರೆ ಬೇರೆ ಎಂದರೆ ಸರಿಯಲ್ಲ.

ದಾವಾ ಸ್ವತ್ತು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯು ದಾವಾ ಸ್ವತ್ತನ್ನು 1 ನೇ ಪ್ರತಿವಾದಿಯಿಂದ ದಿನಾಂಕ 16.01.2013 ರ ಕ್ರಯಪತ್ರದಂತೆ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ ಸದರಿ ಕ್ರಯಪತ್ರದಂತೆ 2 ನೇ ಪ್ರತಿವಾದಿ ಹೆಸರಿಗೆ ಖಾತೆ ಬದಲಾವಣೆಯಾಗಿದೆ ಎಂದರೆ ಸರಿ. ದಾವಾ ಸ್ವತ್ತಿನ ಸ್ವಾಧೀನದಲ್ಲಿ 2 ನೇ ಪ್ರತಿವಾದಿ ಇರುತ್ತಾರೆ ಎಂದರೆ ಸರಿಯಲ್ಲ. ಈ ಪ್ರಕರಣ ಸಲ್ಲಿಸಿ ಖಾತೆ ಬದಲಾವಣೆಯಾಗಿರುವುದನ್ನು ಪ್ರಶ್ನಿಸಿರುತ್ತೇನೆ. ದಾವಾ ಸ್ವತ್ತಿಗೂ ನಮಗೂ ಯಾವುದೇ ಸಂಭಂದ ಇಲ್ಲಾ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯಿಂದ ದಾವಾ ಸ್ವತ್ತನ್ನು ಕಬಳಿಸಲು ಈ ದಾವೆ ತಂದಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಾ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**Sd/-**

(ಕೇಶವಮೂರ್ತಿ.ಬಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಬಂಗಾರಪೇಟೆ.